# ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು ರವರ ನ್ಯಾಯಾಲಯದಲ್ಲಿ

ಪ್ರಕರಣ ಸಂಖ್ಯೆ: **R.A- 11/2011-12**

ಉಪಸ್ಥಿತರು:- **K.P ಮೋಹನ್ ರಾಜ್, I.A.S.**
ಜಿಲ್ಲಾಧಿಕಾರಿ,
ತುಮಕೂರು ಜಿಲ್ಲೆ,
ತುಮಕೂರು.

| ಮೇಲ್ಮನವಿದಾರರು | -ವಿರುದ್ಧ- | ಪ್ರತಿವಾದಿಗಳು |
|---|---|---|
| ನಾಗರಾಜು H.L. ಬಿನ್ ಲಿಂಗಣ್ಣ,<br>ಜೋನಿಗರಹಳ್ಳಿ ನಿವಾಸಿ,<br>ಸಿ.ಎನ್.ದುರ್ಗ ಹೋಬಳಿ,<br>ಕೊರಟಗೆರೆ ತಾಲ್ಲೂಕು.<br><br>(ಶ್ರೀ.E.ಹನುಮಂತರಾಯಪ್ಪ,<br>ಮೇಲ್ಮನವಿದಾರರ ಪರ ವಕೀಲರು) | | 1. ಕಾರ್ಯದರ್ಶಿಗಳು,<br>ಭೂ ಮಂಜೂರಾತಿ ಸಮಿತಿ,<br>ಕೊರಟಗೆರೆ ತಾಲ್ಲೂಕು,<br>ಕೊರಟಗೆರೆ.<br>2. ಉಪವಿಭಾಗಾಧಿಕಾರಿಗಳು,<br>ಮಧುಗಿರಿ ಉಪವಿಭಾಗ,<br>ಮಧುಗಿರಿ |

1. ಮೇಲ್ಮನವಿದಾರರು ಪ್ರಸಕ್ತ ಮೇಲ್ಮನವಿಯನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 50 ರಡಿಯಲ್ಲಿ 2ನೇ ಪ್ರತಿವಾದಿಗಳ RA(A)-8/2009-10ರ ಕ್ರಮಾಂಕದ ದಿನಾಂಕ:06.09.2010ರ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿರುತ್ತಾರೆ. ಮೇಲ್ಮನವಿ ಪ್ರಶ್ನಿತ ಆದೇಶ ಹಾಗೂ ಅಧೀನ ನ್ಯಾಯಾಲಯ, ಕಛೇರಿಯ ಹಾಗೂ ಈ ನ್ಯಾಯಾಲಯದ ಕಡತದ ಮೇಲಿನ ದಾಖಲೆಗಳಿಂದ ವ್ಯಕ್ತಪಡುವಂತೆ ಪ್ರಕರಣದ ಮುಖ್ಯ ಅಂಶಗಳು ಕೆಳಕಂಡಂತಿವೆ.

2. ಕೊರಟಗೆರೆ ತಾಲ್ಲೂಕು, ಚನ್ನರಾಯನದುರ್ಗ ಹೋಬಳಿ, ಜುಂಜರಾಮನಹಳ್ಳಿ ಗ್ರಾಮದ ಸ.ನಂ.97 ಮೂಲತಃ ಸರ್ಕಾರಿ ಗೋಮಾಳವಾಗಿದ್ದು, ಇದರ ವಿಸ್ತೀರ್ಣ 209-00 ಎಕರೆ ಈ ಪೈಕಿ 199 ಎಕರೆ ವಿಸ್ತೀರ್ಣ ಸರ್ಕಾರದಿಂದ ಅರಣ್ಯ ಇಲಾಖೆಗೆ ಮಂಜೂರಾಗಿದ್ದು, ಪಹಣಿಯಲ್ಲಿ ದಾಖಲಿಸಲಾಗಿದೆ. ಇದಾದ ನಂತರ 21-20 ಗುಂಟೆ ಪಿಲೆ ಆಗಿದ್ದು, ಉಳಿಕೆ ವಿಸ್ತೀರ್ಣ 78-20 ಗುಂಟೆ ಎಂಬುದು 2000-01 ಮತ್ತು 2001-02ನೇ ಸಾಲಿನ ಪಹಣಿ ದಾಖಲೆಗಳಿಂದ ವ್ಯಕ್ತವಾಗುತ್ತದೆ. ಮೇಲ್ಮನವಿದಾರರು ಹಾಗೂ ಇತರೆ 6 ಜನ ಸ.ನಂ.97ರಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದು, ಇದನ್ನು ತಮಗೆ ಮಂಜೂರು ಮಾಡಲು ಕೋರಿ ತಾಲ್ಲೂಕು ಕಛೇರಿಗೆ ನಮೂನೆ-53ರಲ್ಲಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಅಪೀಲುದಾರರು ಸೇರಿದಂತೆ ಎಲ್ಲಾ 7 ಜನರ ಅರ್ಜಿಗಳನ್ನು ಒಟ್ಟುಗೂಡಿಸಿ ರಾಜಸ್ವ ನಿರೀಕ್ಷಕರು, ಉಪತಹಶೀಲ್ದಾರ್‌ರವರುಗಳ ವರದಿ ಹಾಗೂ ತಾಲ್ಲೂಕು ಸರ್ವೆಯರ್‌ರವರು ತಯಾರಿಸಿದ ನಕ್ಷೆ ಹಾಗೂ ಗ್ರಾಮಸ್ಥರು ಮಹಜರ್‌ನೊಂದಿಗೆ ಕಡತ

ಸಿದ್ದಪಡಿಸಿ ತಹಶೀಲ್ದಾರ್‌ರವರು ಭೂ ಮಂಜೂರಾತಿ ಬಗರ್‌ಹುಕುಂ ಸಾಗುವಳಿ ಸಮಿತಿ ಮುಂದೆ ಮಂಡಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯು 07 ಅರ್ಜಿಗಳ ಪೈಕಿ ನರಸಿಂಹರಾಜು ಮತ್ತು ದೊಡ್ಡನರಸಯ್ಯ ಇವರುಗಳು ಸಾಗುವಳಿ ಮಾಡುತ್ತಿದ್ದನ್ನು ಬಿಟ್ಟರೆ ಇನ್ನುಳಿದ 05 ಜನ ಅರ್ಜಿದಾರರು (ಪ್ರಸಕ್ತ ಮೇಲ್ಮನವಿದಾರರು ಸೇರಿದಂತೆ) ಬಗರ್‌ಹುಕುಂ ಸಾಗುವಳಿ ಮಾಡುತ್ತಿಲ್ಲ ಎಂಬುದಾಗಿ ತಿರ್ಮಾನಿಸಿ ಮೇಲ್ಮನವಿದಾರರ ಹಾಗೂ ಇತರೆ 4 ಜನರು ಸಲ್ಲಿಸಿದ ನಮೂನೆ 53 ನ್ನು ದಿನಾಂಕ:08.02.2004 ರ ಸಭೆಯಲ್ಲಿ ವಜಾ ಮಾಡಿರುತ್ತದೆ. ಈ ಬಗ್ಗೆ No.R.U.CR-780/1998-99 ದಿನಾಂಕ:02.07.2009 ರಲ್ಲಿ ಮೇಲ್ಮನವಿದಾರರಿಗೆ ಹಿಂಬರಹವನ್ನು ನೀಡಲಾಗಿದೆ.

3. ಮೇಲ್ಮನವಿದಾರರು ಬಗರ್‌ಹುಕುಂ ಸಕ್ರಮೀಕರಣ ಸಮಿತಿ ತಮ್ಮ ಅರ್ಜಿಯನ್ನು ತಿರಸ್ಕರಿಸಿರುವುದನ್ನು ಪ್ರಶ್ನಿಸಿ ಉಪವಿಭಾಗಾಧಿಕಾರಿಯವರು ಮಧುಗಿರಿ, ಉಪವಿಭಾಗ ಇವರ ನ್ಯಾಯಾಲಯದಲ್ಲಿ ಮೊದಲನೇ ಮೇಲ್ಮನವಿಯನ್ನು ಸಲ್ಲಿಸಿದ್ದು, ವಿಚಾರಣೆ ನಡೆಸಿದ ಉಪವಿಭಾಗಾಧಿಕಾರಿಯವರು ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯು ದಿನಾಂಕ:08.02.2004 ರಂದು ತೆಗೆದುಕೊಂಡ ನಿರ್ಣಯ ನಿಯಮಾನುಸಾರವಾಗಿದೆ ಎಂಬುದಾಗಿ ತಿರ್ಮಾನಿಸಿ ದಿನಾಂಕ:06.09.2010 ರಲ್ಲಿ ಮೇಲ್ಮನವಿಯನ್ನು ವಜಾಗೊಳಿಸಿರುತ್ತಾರೆ. ಉಪವಿಭಾಗಾಧಿಕಾರಿಗಳ ಆದೇಶದ ವಿರುದ್ಧ ಈ ನ್ಯಾಯಾಲಯದಲ್ಲಿ ಪ್ರಸಕ್ತ 2ನೇ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.

4. ಪ್ರಕರಣವನ್ನು ಕಡತದ ಮೇಲೆ ತೆಗೆದುಕೊಂಡು ತಿಳುವಳಿಕೆ ನೀಡಿ ವಿಚಾರಣೆ ನಡೆಸಲಾಯಿತು. ದಿನಾಂಕ:23.11.2015 ರಂದು ಪ್ರಕರಣವನ್ನು ಕರೆದಾಗ ಮೇಲ್ಮನವಿದಾರರ ಪರ ವಕೀಲರು ಹಾಜರಿದ್ದು, ತಮ್ಮ ವಾದವನ್ನು ಮಂಡಿಸಿರುತ್ತಾರೆ. ಇವರ ವಾದವನ್ನು ಪೂರ್ಣವಾಗಿ ಆಲಿಸಿದ ನಂತರ ಕಡತದಲ್ಲಿನ ದಾಖಲೆಗಳ ಆಧಾರದ ಮೇಲೆ ಅಂತಿಮ ಆದೇಶಕ್ಕಾಗಿ ಪ್ರಕರಣವನ್ನು ಕಾಯ್ದಿರಿಸಲಾಯಿತು.

5. ಈ ಮೇಲ್ಮನವಿಯನ್ನು 2ನೇ ಪ್ರತಿವಾದಿಗಳವರ ದಿನಾಂಕ:06.09.2010 ರ ಆದೇಶವನ್ನು ಪ್ರಶ್ನಿಸಿ ದಿನಾಂಕ:13.06.2011 ರಂದು ಸಲ್ಲಿಸಲಾಗಿದೆ. ಮೇಲ್ಮನವಿಯನ್ನು ಸಲ್ಲಿಸಲು ತೆಗೆದುಕೊಂಡ ಕಾಲಾವಕಾಶ 279 ದಿನಗಳು ಆದರೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 51 (B) ರಡಿಯಲ್ಲಿ 2ನೇ ಮೇಲ್ಮನವಿಯನ್ನು ಸಲ್ಲಿಸಲು ನಿರ್ಧಿಷ್ಟಪಡಿಸಲಾದ ಅವಧಿ 90 ದಿನಗಳು (Limitation on period 90 days from the date of the order appealed against) 2ನೇ ಮೇಲ್ಮನವಿಯನ್ನು 90 ದಿನಗಳನ್ನು ಕಳೆದರೆ 189 ದಿನಗಳಷ್ಟು ಕಾಲವಿಳಂಬವಾಗಿ ಸಲ್ಲಿಸಿದ್ದು, ಮೇಲ್ಮನವಿದಾರರು ಪ್ರಸಕ್ತ ಮೇಲ್ಮನವಿಯನ್ನು ಸಲ್ಲಿಸಲು ಆಗಿರಬಹುದಾದ ಕಾಲವಿಳಂಬವನ್ನು ಮನ್ನಿಸುವಂತೆ ಕೋರಿ ಲಿಮಿಟೇಷನ್ ಕಾಯ್ದೆ ಕಲಂ 5 ರಡಿ ಅರ್ಜಿ ಸಲ್ಲಿಸಿರುವುದರಿಂದ ಇದನ್ನು ಮೊದಲು ಇತ್ಯರ್ಥಕ್ಕೆ ತೆಗೆದುಕೊಂಡಿರುತ್ತದೆ. ಮೇಲ್ಮನವಿದಾರರು ಲಿಮಿಟೇಷನ್ ಅರ್ಜಿಯೊಂದಿಗೆ ಸಲ್ಲಿಸಿರುವ ಅಪಿಡವಿಟ್‌ನಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ಆದ ವಿಳಂಬಕ್ಕೆ ಕಾರಣವನ್ನು ಕೆಳಗಿನಂತೆ ನೀಡಿರುತ್ತಾರೆ.

> "ಪ್ರಶ್ನಿತ ಆದೇಶವಾದ ಬಗ್ಗೆ ತಮಗೆ ಮಾಹಿತಿ ಇರಲಿಲ್ಲ. ಇತ್ತೀಚೆಗೆ ತಿಳಿದ ಕೂಡಲೇ ಇದರ ಪ್ರತಿಯನ್ನು ಪಡೆದಿರುತ್ತೇನೆ. ಹಾಗೂ ದೀರ್ಘಕಾಲದಿಂದ ತಮಗೆ ಆರೋಗ್ಯ ಸರಿ

ಇಲ್ಲದ್ದರಿಂದಲೂ ಮೇಲ್ಮನವಿ ಸಕಾಲದಲ್ಲಿ ಸಲ್ಲಿಸಲು ವಿಳಂಬವಾಗಿದೆ. ಇದು ದುರುದ್ದೇಶದಿಂದ ಕೂಡಿದ್ದಲ್ಲ ಎಂಬುದು".

ಅಧೀನ ನ್ಯಾಯಾಲಯದ ಕಡತವನ್ನು ಪರಿಶೀಲಿಸಲಾಗಿ ಮೇಲ್ಮನವಿದಾರರಿಗೆ CAR.CR-331/2010-11ರ ಮೂಲಕ ದಿನಾಂಕ:07.02.2011 ರಂದೇ ಪ್ರಶ್ನಿತ ಆದೇಶವನ್ನು ನೀಡಲಾಗಿದ್ದು, ಮೇಲ್ಮನವಿಯನ್ನು ದಿನಾಂಕ:13.06.2011 ರಂದು ಸಲ್ಲಿಸಿದ್ದಾರೆ. ಕಾಲವಿಳಂಬ ಮನ್ನಿಸಲು ನೀಡಿರುವ ಕಾರಣಗಳು ತೃಪ್ತಿಕರವಾಗಿರುವುದಿಲ್ಲ. ಪ್ರಯುಕ್ತ ಕಾಲವಿಳಂಬ ಮನ್ನಾ ಅರ್ಜಿಯನ್ನು ತಿರಸ್ಕರಿಸಲಾಗಿದೆ.

6. ಬಗರ್‌ಹುಕುಂ ಸಕ್ರಮೀಕರಣ ಸಮಿತಿ ಹಾಗೂ 2ನೇ ಪ್ರತಿವಾದಿಗಳವರು ಮೇಲ್ಮನವಿದಾರರು ಜಮೀನು ಸಾಗುವಳಿ ಮಾಡಿರುವುದಿಲ್ಲ ಎಂಬುದಾಗಿ Concurrent findings ನೀಡಿರುತ್ತಾರೆ. ಮೇಲ್ಮನವಿದಾರರು ತಾವು ಸದರಿ ಜಮೀನಿನಲ್ಲಿ ಅನಧಿಕೃತ ಸಾಗುವಳಿ ಮಾಡುತ್ತಿರುವುದಕ್ಕೆ, ಕರ್ನಾಟಕ ಭೂ ಮಂಜೂರಾತಿ ಅಧಿನಿಯಮ 1969ರ ಕಲಂ 108Fರಡಿ ತಿಳಿಸಿರತಕ್ಕ ಅರ್ಹತೆಗಳ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ಅವಶ್ಯಕತೆ ಪೂರೈಸದ ಮೇಲ್ಮನವಿದಾರರ ಕ್ಲೈಂ ಪರಿಗಣಿಸಲು ಸಾಧ್ಯವಿಲ್ಲ. ಅಲ್ಲದೆ ಸರ್ಕಾರಿ ಜಮೀನಿನ ವಿರುದ್ಧ ಮೇಲ್ಮನವಿದಾರರ ಪ್ರತಿಕೂಲ ಸ್ವಾಧೀನದ ಬಗ್ಗೆ ಹೇಳಿರುವ ವಾದ ತೆಗೆದುಕೊಳ್ಳಲು ಬರುವುದಿಲ್ಲ. ಆದ್ದರಿಂದ ಕೆಳಗಿನಂತೆ ಆದೇಶಿಸಿದೆ.

## -: ಆದೇಶ :-

ಮೇಲೆ ವಿವರಿಸಿರತಕ್ಕ ಕಾರಣಗಳಿಂದ ಕಾಲವಿಳಂಬ ಮನ್ನಾ ಕೋರಿ ಸಲ್ಲಿಸಿರುವ ಅರ್ಜಿ ಹಾಗೂ ಮೇಲ್ಮನವಿಯನ್ನು ತಿರಸ್ಕರಿಸಿದೆ.

ಈ ಆದೇಶವನ್ನು ದಿನಾಂಕ: 06-01-2017 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

KPM
ಜಿಲ್ಲಾಧಿಕಾರಿ, 06/01/17
ತುಮಕೂರು ಜಿಲ್ಲೆ.